# ನಾಮಜಪದ ಮಹತ್ವ ಮತ್ತು ಲಾಭಗಳು

## ಮನೋಗತ

* ಏಕ ತುಝೆ ನಾಮ । ಶಾಸ್ತ್ರಾಂಚಾ ಆಧಾರ ।
ವೇದಾಂಚ್ಯಾ ಜೆ ಪಾರ । ತತ್ತ್ವ ತುಝೆ ॥

* ಕಲಿಯುಗೀ ಧರ್ಮ ಹಾ ಕೊಸಾಂತರೀ ।
ನಾಮಚೀ ತಾರೆಲ ಭವಸಾಗರೀ ॥

ಮುಂತಾದ ಭಜನೆಗಳ ಮೂಲಕ ನಮ್ಮ ಗುರುಗಳಾದ ಪ.ಪೂ. ಭಕ್ತರಾಜ ಮಹಾರಾಜರು 'ನಾಮದ ಮಹತ್ವ'ವನ್ನು ಹೇಳಿದ್ದಾರೆ. ಸಂತ ತುಕಾರಾಮ ಮಹಾರಾಜರು, ಬ್ರಹ್ಮಚೈತನ್ಯ ಗೋಂದವಲೇಕರ ಮಹಾರಾಜರು, ಸಂತ ಕಬೀರರಂತಹ ಸಂತರೂ ನಾಮದ ಮಹತ್ವವನ್ನು ಹೇಳಿದ್ದಾರೆ. ಹೀಗಿರುವಾಗಲೂ ಚಿಕ್ಕದಾದ ನಾಮದ ದೋಣಿಯಿಂದ ವಿಶಾಲವಾದ ಭವಸಾಗರವನ್ನು ದಾಟಿ ಹೇಗೆ ಈಶ್ವರಪ್ರಾಪ್ತಿ ಆಗುವುದು ಎಂಬ ಸಂದೇಹ ಮತ್ತು ವಿಕಲ್ಪಗಳು ಅನೇಕ ಜನರ ಮನಸ್ಸಿನಲ್ಲಿ ಇರುತ್ತವೆ. ನಾಮಸ್ಮರಣೆ ಮಾಡದೇ ಈಶ್ವರನ ಅನುಭೂತಿಯೂ ಬರುವುದಿಲ್ಲ ಮತ್ತು ಬುದ್ಧಿಗೆ ತಿಳಿಯದೇ ನಾಮಸ್ಮರಣೆ ಮಾಡಲೂ ಆಗುವುದಿಲ್ಲ. ಇಂತಹ ವಿಚಿತ್ರ ಸ್ಥಿತಿಯಿಂದಾಗಿ ಬಹಳಷ್ಟು ಜನರು ನಾಮಸ್ಮರಣೆಯನ್ನು ಮಾಡದೇ ನಾಮದಲ್ಲಿ ಏನೂ ಅರ್ಥವಿಲ್ಲ ಎಂಬ ನಿರ್ಣಯಕ್ಕೆ ಬರುತ್ತಾರೆ. ನಾಮದ ಬಗೆಗಿನ ಎಲ್ಲ ಸಂದೇಹಗಳ ಮತ್ತು ವಿಕಲ್ಪಗಳ ನಿವಾರಣೆಯಾಗಬೇಕು ಮತ್ತು ಭಗವಂತನ ಸರ್ವಶ್ರೇಷ್ಠ ವಿಭೂತಿಯಾಗಿರುವ ನಾಮದ ಅಸಾಧಾರಣ ಮಹತ್ವವು ತಿಳಿಯಬೇಕೆಂದು ಈ ಗ್ರಂಥವನ್ನು ಮಾಡಲಾಗಿದೆ. ಈ ಗ್ರಂಥದಲ್ಲಿ ನೀಡಲಾಗಿರುವ ವಿವಿಧ ಅಂಶಗಳನ್ನು ಓದಿ, ಉದಾ. ನಾಮ ಎಂದರೆ ವೇದಗಳ ಉತ್ಪತ್ತಿಯ ಸ್ಥಾನ, ನಾಮವು ಸದಾಚಾರೀ ಮತ್ತು ಪಾಪಿ ಎಲ್ಲ ಜನರನ್ನೂ ರಕ್ಷಿಸುತ್ತದೆ, ಯಾವುದೇ ಸಾಧನೆಯಲ್ಲಿನ ಪೂರ್ಣತ್ವಕ್ಕೆ ನಾಮವು ಅವಶ್ಯಕ, ಜೀವನಮುಕ್ತರಿಗೂ ನಾಮವು ಅವಶ್ಯಕ. ಈ ಗ್ರಂಥವನ್ನು ಓದಿ ನಾಮದ ಬಗ್ಗೆ ಶ್ರದ್ಧೆಯು ಹೆಚ್ಚಾಗಲು ಖಂಡಿತವಾಗಿಯೂ ಸಹಾಯವಾಗುವುದು.

ನಾಮಜಪದಿಂದ ಶಾರೀರಿಕ ಮತ್ತು ಮಾನಸಿಕ ರೋಗಗಳು ಕಡಿಮೆಯಾಗುವುದು, ಮನಸ್ಸಿನ ಏಕಾಗ್ರತೆ ಹೆಚ್ಚಾಗುವುದು, ದುಃಖಗಳು ಕಡಿಮೆಯಾಗುವುದು, ಎಲ್ಲ ಪಾಪಗಳು ನಾಶವಾಗುವುದು, ಮೃತ್ಯುವಿನ ನಂತರವೂ ಲಾಭವಾಗುವುದು ಮುಂತಾದ ವಿವಿಧ ಸ್ತರಗಳಲ್ಲಾಗುವ ಲಾಭಗಳ ಮಾಹಿತಿಯನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ. ಈಶ್ವರಪ್ರಾಪ್ತಿಯನ್ನು ಮಾಡಿಕೊಳ್ಳಲು ಕರ್ಮಯೋಗ, ಭಕ್ತಿಯೋಗ, ಧ್ಯಾನಯೋಗ ಮತ್ತು ಜ್ಞಾನಯೋಗ ಮುಂತಾದ ಸಾಧನೆಯ ವಿವಿಧ ಮಾರ್ಗಗಳಿವೆ. ದಿನನಿತ್ಯದ ಪ್ರಪಂಚದಲ್ಲಿ ವ್ಯಸ್ತವಾಗಿರುವ ಸಾಮಾನ್ಯ ಸಂಸಾರಸ್ಥರಿಗೂ ಆಚರಿಸಲು ಸುಲಭವಾಗಿರುವ, ಮಡಿಮೈಲಿಗೆ, ಸ್ಥಳಕಾಲ ಮುಂತಾದ ಬಂಧನಗಳಿಂದ ಮುಕ್ತವಾಗಿರುವ ಮತ್ತು ಭಗವಂತನೊಂದಿಗೆ ಸತತ ಅನುಸಂಧಾನವನ್ನು ಸಾಧಿಸಿಕೊಡುವ ಅರ್ಥಾತ್ ಅಖಂಡ ಸಾಧನೆ ನಡೆಯುವಂತಹ ಏಕೈಕ ಸಾಧನಾಮಾರ್ಗವೆಂದರೆ

ನಾಮಯೋಗ. ಇದು ಹೇಗೆ ಎಂಬುದೂ ಈ ಗ್ರಂಥದಿಂದ ಗಮನಕ್ಕೆ ಬರುವುದು. ಇದರಿಂದ 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ನಾಮಸಾಧನೆಯನ್ನು ಮಾಡುವುದು ಪ್ರತಿಯೊಬ್ಬರಿಗೂ ಏಕೆ ಅವಶ್ಯಕವಾಗಿದೆ ಎಂಬುದು ಗಮನಕ್ಕೆ ಬರುತ್ತದೆ.

ಈ ಗ್ರಂಥದಲ್ಲಿ ನೀಡಲಾಗಿರುವ ನಾಮದ ಮಹತ್ವವನ್ನು ತಿಳಿದುಕೊಂಡು ವಾಚಕರು ನಾಮಸಾಧನೆಯನ್ನು ಪ್ರಾರಂಭಿಸಲಿ ಎಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥನೆ.

**- ಸಂಕಲನಕಾರರು**

**ಟಿಪ್ಪಣಿ –** ಗ್ರಂಥದಲ್ಲಿನ ಬಹುತೇಕ ಕೋಷ್ಟಕಗಳಲ್ಲಿ ನೀಡಿರುವ ಶೇಕಡಾವಾರು ಸಂಖ್ಯೆಗಳು ಸಂಕಲನಕಾರರಾದ ಪರಾತ್ಪರ ಗುರು ಡಾ. ಜಯಂತ ಬಾಳಾಜಿ ಆಠವಲೆಯವರಿಗೆ ಧ್ಯಾನದಲ್ಲಿ ಈಶ್ವರನಿಂದ ಪ್ರಾಪ್ತವಾದ ಜ್ಞಾನವಾಗಿದೆ.


**ಸಾಧನೆಗೆ ಸಂಬಂಧಿಸಿದ ಸನಾತನದ ಗ್ರಂಥ !**

## ಅಧ್ಯಾತ್ಮದ ಪ್ರಾಸ್ತಾವಿಕ ವಿವೇಚನೆ

- ಕಲಿಯುಗದಲ್ಲಿ ಸರ್ವೋತ್ತಮ ಸಾಧನೆ ಯಾವುದು ?
- ಜೀವನದಲ್ಲಿ ಎದುರಾಗುವ ಒತ್ತಡಗಳಿಂದ ನಾವು ಹೇಗೆ ಮುಕ್ತರಾಗಬಹುದು ?
- ಸಾಧನೆಯನ್ನು ಮಾಡಲು ಪ್ರಾರಂಭಿಸುವುದರಿಂದ ಸಂಸಾರದೆಡೆಗೆ ನಿರ್ಲಕ್ಷ್ಯವಾಗುತ್ತದೆಯೇ ?
- ನಾವು ಯಾವಾಗಲೂ ಸುಖದಲ್ಲಿರಲು ಏನು ಮಾಡಬೇಕು ?
- ನಾವು ಯಾವ ದೇವತೆಯ ಉಪಾಸನೆಯನ್ನು ಮಾಡಬೇಕು ?




**ಸನಾತನದ ಗ್ರಂಥಕಾರ್ಯದಲ್ಲಿ ಪಾಲ್ಗೊಂಡು ಸಮಷ್ಟಿ ಸಾಧನೆ ಮಾಡಿ !**

- ಮರಾಠಿ ಭಾಷೆಯಲ್ಲಿನ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡುವುದು
- ಗ್ರಂಥದ ರಚನೆಯನ್ನು 'ಇನ್‌ಡಿಸೈನ್' ಎಂಬ ಗಣಕ ತಂತ್ರಾಂಶದಲ್ಲಿ ಮಾಡುವುದು

ಗ್ರಂಥನಿರ್ಮಿತಿಯ ಕಾರ್ಯದಲ್ಲಿ ಪಾಲ್ಗೊಳ್ಳಲು ಸಂಪರ್ಕಿಸಿ !

93424 35617 ಅಥವಾ kannada.granth@gmail.com

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. 'ನಾಮಸಂಕೀರ್ತನಯೋಗ'ದ ಅರ್ಥ** ೧೫

**೨. 'ನಾಮಸಂಕೀರ್ತನ'ದ ಸಮಾನಾರ್ಥ ಶಬ್ದಗಳು** ೧೫

**೩. 'ಜಪ' ಈ ಶಬ್ದದ ಅರ್ಥ ಮತ್ತು ಪ್ರಕಾರಗಳು** ೧೫

**೪. ನಾಮಜಪದ ಬಗೆಗಿನ ತಪ್ಪು ತಿಳುವಳಿಕೆಗಳು** ೧೬

**೫. ನಾಮದ ವೈಶಿಷ್ಟ್ಯಗಳು** ೧೬

* ನಾಮದ ಬಗೆಗಿನ ವಿಕಲ್ಪವು ನಾಮದಿಂದಲೇ ದೂರವಾಗುವುದು ೧೭
* ನಾಮದ 'ಮೂರ್ತಿ ಚಿಕ್ಕದಾದರೂ; ಕೀರ್ತಿ ದೊಡ್ಡದು' ೧೮

**೬. ನಾಮಜಪದಲ್ಲಿನ ತತ್ತ್ವ** ೧೮

* ಮಾಯೆಯ ಆಸಕ್ತಿಯನ್ನು ಕಡಿಮೆ ಮಾಡಲು ನಾಮಜಪವು ಆವಶ್ಯಕ ೧೮

**೭. ನಾಮಜಪದ ಮಹತ್ತ್ವ** ೧೯

* ನಾಮದಿಂದ ಧ್ಯೇಯ ನಿಶ್ಚಿತವಾಗುವುದು ೨೨
* ಎಲ್ಲರಿಗೂ ಸುಲಭವಾದಂತಹ ಬಂಧನವಿರಹಿತ ಸಾಧನೆ ೨೩
* ನಾಮವು ಸದಾಚಾರಿ ಮತ್ತು ದುರಾಚಾರಿ ಎಲ್ಲರಿಗೂ ತಾರಕವಾಗಿದೆ ೨೪
* ನಾಮಸ್ಮರಣೆ ಮಾಡುವುದು ಕರ್ತವ್ಯವಾಗಿದೆ ೨೫
* ಅಂತ್ಯಕಾಲ ಮತ್ತು ನಾಮಸ್ಮರಣೆ ೨೬

**೮. ನಾಮಜಪದ ಲಾಭಗಳು** ೨೮

* ವಾಸನೆ ಮತ್ತು ದುಃಖ ನಾಶವಾಗಲು ನಾಮಜಪ ಮಾಡಿ ! ೩೦
* ಅಂತರ್ಮುಖತೆ ಮತ್ತು ಅಂತರ್‌ನಿರೀಕ್ಷಣೆ ೩೧
* ಮನಸ್ಸಿನ ಏಕಾಗ್ರತೆಯು ಹೆಚ್ಚಾಗುವುದು ೩೨
* ಅಧ್ಯಾತ್ಮಶಾಸ್ತ್ರದ ದೃಷ್ಟಿಯಿಂದ ಲಾಭಗಳು ೩೨

**೯. ನಾಮಜಪ ಮತ್ತು ಇತರ ಯೋಗಮಾರ್ಗಗಳ ತುಲನೆ** ೫೧

* ವಿವಿಧ ಯೋಗಮಾರ್ಗಗಳು ಮತ್ತು ನಾಮಜಪ ೬೪

**卐 ನಾಮಜಪ, ದೇವತೆ ಇತ್ಯಾದಿಗಳ ಬಗ್ಗೆ ಟೀಕೆಗಳು ಮತ್ತು ಅವುಗಳ ಖಂಡನೆ** ೭೦